ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	999
ಮಾನ್ಯ ಸದ್ಯಸರ ಹೆಸರು :	ಡಾ: ವೈ. ಎ. ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದವರು:	ಅಬಕಾರಿ ಸಚಿವರು
ಉತ್ತರಿಸಬೇಕಾದ ದಿನಾಂಕ:	12–03–2020

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಅಬಕಾರಿ ಇಲಾಖೆಯ ಅಧಿಕಾರಿಗಳು ಸನ್ನದ್ಧುದಾರರ ಮೇಲೆ ಒತ್ತಡ ಹಾಕಿ ಮದ್ಯ ಮಾರಾಟ ಪ್ರಮಾಣವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಇಲ್ಲ.
ಆ)	ಇಂತಹ ಒತ್ತಡಗಳಿಂದ ಸನ್ನದುದಾರರು ಮಾನಸಿಕ ಒತ್ತಡ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಉದ್ಭವಿಸುವುದಿಲ್ಲ.
ಇ)	ಅಬಕಾರಿ ಸನ್ನದನ್ನು ನವೀಕರಣ ಮಾಡಲು ಇರುವ ಪದ್ದತಿ ಏನು;(ವಿವರಗಳನ್ನು ನೀಡುವುದು)	ಅಬಕಾರಿ ಸನ್ನದನ್ನು ನವೀಕರಣ ಮಾಡಲು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 5–ಎ ರಲ್ಲಿ ಅವಕಾಶವಿರುತ್ತದೆ. ಅಬಕಾರಿ ಸನ್ನದನ್ನು ನವೀಕರಣ ಮಾಡಲು ಸನ್ನದುದಾರರು ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಹಾಗೂ ಅದರೊಂದಿಗೆ ಅಗತ್ಯ ದಾಖಲಾತಿಗಳನ್ನು ಆನ್‌ಲೈನ್ ಮುಖಾಂತರ ಆಯಾ ವಲಯದ ಅಬಕಾರಿ ನಿರೀಕ್ಷಕರ ಕಚೇರಿಗೆ ಸಲ್ಲಿಸಬೇಕಾಗಿರುತ್ತದೆ. ಪರಿಶೀಲಿಸಿದ ಅರ್ಜಿಯನ್ನು ಆಯಾಯ ವ್ಯಾಪ್ತಿಯ ಉಪ ವಿಭಾಗದ ಉಪ ಅಧಿಕ್ಷಕರು ಪರಿಶೀಲಿಸಿ, ಜಿಲ್ಲೆಯ ಅಬಕಾರಿ ಉಪ ಆಯುಕ್ತರಿಗೆ ಶಿಫಾರಸ್ಸು ಮಾಡಿ ಸಲ್ಲಿಸುತ್ತಾರೆ. ಅಬಕಾರಿ ಉಪ ಆಯುಕ್ತರು ತಮ್ಮ ಶಿಫಾರಸ್ಸಿನೊಂದಿಗೆ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುತ್ತಾರೆ. ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಪರಿಶೀಲಿಸಿ ಸನ್ನದಿನ ನವೀಕರಣಕ್ಕೆ ಆದೇಶ ನೀಡುತ್ತಾರೆ. ಈ ಎಲ್ಲಾ ಪ್ರಕ್ರಿಯೆಯು ಆನ್‌ಲೈನ್ ಮುಖಾಂತರವೇ ಜರುಗುತ್ತದೆ. ಸನ್ನದು ನವೀಕರಿಸಲು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರನ್ವಯ ಸಲ್ಲಿಸಬೇಕಾದ ದಾಖಲಾತಿಗಳ ವಿವರ:

		1) ನಿಗದಿತ ನಮೂನೆಯಲ್ಲಿ ಅರ್ಜಿ. 2) ಹಿಂದಿನ ವರ್ಷದ ಸನ್ನದಿನ ಮೂಲ ಪ್ರತಿ. 3) ಹಿಂದಿನ ವರ್ಷದ ಸನ್ನದಿನ ಸ್ಥಳದ ನೀಲಿ ನಕ್ಷೆ. 4) ಮದ್ಯದ ಬ್ರಾಂಡ್ ಗಳ ತಃಖ್ತೆ. 5) ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 4–ಬಿ ರಡಿ ಸನ್ನದು ಹೊಂದಲು ಅರ್ಹರಿರುವ ಬಗ್ಗೆ ಅರ್ಜಿದಾರರಿಂದ ನೋಟರೀಕೃತ ಮುಚ್ಚಳಿಕೆ. 6) ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 8 ಮತ್ತು 8ಬಿ ರನ್ವಯ ಸನ್ನದು ಶುಲ್ಕವನ್ನು ಭರಿಸುವ ಚಲನ್ ಮೂಲ ಪ್ರತಿ. 7) ಅರ್ಜಿದಾರರ ದೃಢೀಕೃತ ಭಾವಚಿತ್ರ ಮತ್ತು ಮಾದರಿ ಸಹಿ. 8) ಅರ್ಜಿದಾರರ ಪಾನ್ ಕಾರ್ಡ್, ಗುರುತಿನ ಚೀಟಿ ಹಾಗೂ ವಿಳಾಸ ದೃಢೀಕರಣ ಪತ್ರ. 9) ಪಾಲುದಾರಿಕೆ ಸಂಸ್ಥೆಯಾದಲ್ಲಿ ಪಾಲುದಾರಿಕೆ ಪತ್ರ, ಸಂಸ್ಥೆ ನೋಂದಣಿ ಪ್ರಮಾಣ ಪತ್ರ. 10) ಸಂಸ್ಥೆಗಳ ಜಿಲ್ಲಾ ನೋಂದಣಾಧಿಕಾರಿಗಳು ನೀಡಿರುವ ನಮೂನೆ. 11) ಕಂಪನಿಯಾದಲ್ಲಿ ಕಂಪನಿಯ ನೋಂದಣಿ ಪ್ರಮಾಣ ಪತ್ರ, ಮೆಮೋರಂಡಮ್ ಮತ್ತು ಆರ್ಟಿಕಲ್ ಆಫ್ ಅಸೋಸಿಯೇಶನ್, ಡೈರೆಕ್ಟರಗಳ ಹೆಸರು, ವಿಳಾಸ ಮತ್ತು ಗುರುತಿನ ಚೀಟಿ.
ಈ)	ಪ್ರತಿ ವರ್ಷ ಮದ್ಯದಂಗಡಿಗಳ ನವೀಕರಣ ಮಾಡುವ ಪದ್ಧತಿಯಿಂದ ಅಬಕಾರಿ ಇಲಾಖೆ ಅಧಿಕಾರಿಗಳು ಹೇರಳವಾಗಿ ಮಿತಿಮೀರಿ ಲಂಚವನ್ನು ನಿಗಧಿಪಡಿಸಿರುವ ವಿಚಾರವು ಸಾರ್ವಜನಿಕ ವಲಯದಲ್ಲಿ ಬಹಳಷ್ಟು ಚರ್ಚೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಕಳೆದ ಎರಡು ವರ್ಷಗಳಿಂದ ಮದ್ಯದಂಗಡಿಗಳ ನವೀಕರಣದ ಪ್ರಕ್ರಿಯೆಯನ್ನು ಸಕಾಲ ವ್ಯಾಪ್ತಿಯ ಆನ್‌ಲೈನ್ ಪದ್ಧತಿಯಲ್ಲಿ ಮಾಡಲಾಗುತ್ತಿದೆ. ಸನ್ನದುದಾರರು ದಾಖಲೆಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಿ, ಸನ್ನದನ್ನು ಆನ್‌ಲೈನ್ ಮೂಲಕ ಪಡೆದುಕೊಳ್ಳಬಹುದಾಗಿದೆ. ಸನ್ನದಿಗಾಗಿ ಯಾವುದೇ ಕಛೇರಿಯನ್ನು ಸಂಪರ್ಕಿಸುವ ಅಗತ್ಯತೆ ಇರುವುದಿಲ್ಲವಾದ್ದರಿಂದ ಲಂಚದ ವಿಚಾರವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

11/3/20

(ಎಚ್. ನಾಗೇಶ್)
ಅಬಕಾರಿ ಸಚಿವರು

ಆಇ 14 ಇ.ಎಲ್.ಕ್ಯೂ. 2020